DECEMBER 20, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಕೇಂದ್ರ ಹಣಕಾಸು ಖಾತೆ ಸಚಿವರಾದ,** ನಿರ್ಮಲಾ ಸೀತಾರಾಮನ್, ವಿಜಯನಗರ ಜಿಲ್ಲೆ, ಹೊಸಪೇಟೆಯ, ಬಾಲಕಿಯರ ಸಂಯುಕ್ತ ಕಿರಿಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ, CYIENT ಸಹಭಾಗಿತ್ವದಲ್ಲಿ ನಿರ್ಮಿಸಿದ, ಎರಡು ಕೃತಕ ಬುದ್ಧಿಮತ್ತೆ ಪ್ರಯೋಗಾಲಯಗಳ ವೀಕ್ಷಿಸಿ, ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದರು.

<><><>

**ಗೃಹ ಲಕ್ಷ್ಮೀ ಯೋಜನೆ ಹಣ ಬಾಕಿ,** ದ್ವೇಷ ಭಾಷಣ ವಿಧೇಯಕ, ಉತ್ತರ ಕರ್ನಾಟಕ ಅಭಿವೃದ್ಧಿ ಕುರಿತ ಚರ್ಚೆ ಹೀಗೆ, ಹಲವು ಘಟನೆಗಳಿಗೆ ಸಾಕ್ಷಿಯಾದ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಿನ್ನೆ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟ, 10 ದಿನಗಳ ಅಧಿವೇಶನದಲ್ಲಿ, ಒಟ್ಟು 23 ವಿಧೇಯಕಗಳು ಅಂಗೀಕಾರಗೊಂಡವು. ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ, ವಿಧಾನಸಭೆಯಲ್ಲಿ 39 ಜನ ಶಾಸಕರು, 17 ಗಂಟೆ ಚರ್ಚೆ ನಡೆಸಿದರೆ, ವಿಧಾನ ಪರಿಷತ್ತಿನಲ್ಲಿ, 12 ಜನ ಸದಸ್ಯರು 5 ಗಂಟೆಗೂ ಹೆಚ್ಚು ಕಾಲ, ಮಹಾದಾಯಿ, ಕಳಸಾ–ಬಂಡೂರಿ, ಕೃಷ್ಣ ಮೇಲ್ದಂಡೆ ಯೋಜನೆ, ಭೀಮಾ ನದಿ ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಕುರಿತ ವಿಷಯಗಳನ್ನು ಚರ್ಚಿಸಿದರು.

<><><>

**ರಾಜ್ಯದ ಪ್ರಮುಖ ಬೆಳೆಗಳಾದ,** ಹಣಸೆ, ಹಲಸು ಮತ್ತು ನೇರಳೆ ಮುಂತಾದ, ಪೌಷ್ಟಿಕಾಂಶ ಯುಕ್ತ ಹಣ್ಣಿನ ಬೆಳೆಗಳಿಗಾಗಿ, ಪ್ರತ್ಯೇಕ ರಾಷ್ಟ್ರೀಯ ಮಂಡಳಿ ಸ್ಥಾಪಿಸುವಂತೆ, ರಾಜ್ಯಸಭೆ ಸಂಸದ ಎಚ್.ಡಿ. ದೇವೇಗೌಡ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ಶಿವರಾಜಸಿಂಗ್ ಚೌವ್ಹಾಣ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ, ಮಾಜಿ ಪ್ರಧಾನಮಂತ್ರಿ, ಔಷಧೀಯ ಗುಣವುಳ್ಳ, ಹೇರಳ ಪೌಷ್ಟಿಕಾಂಶ ಯುಕ್ತ, ಕಡಿಮೆ ಪೋಷಣೆ ಬಯಸುವ, ಕಾಡು ಹಣ್ಣಿನ ಬೆಳೆ, ಗ್ರಾಮೀಣ ಭಾಗದ ಯುವ ಜನತೆಗೆ ಉದ್ಯೋಗಾವಕಾಶ ಮತ್ತು ಆರ್ಥಿಕ ಬಲ ತಂದು ಕೊಡಲಿದೆ ಎಂದು, ಅವರು ಮನವಿಯಲ್ಲಿ ತಿಳಿಸಿದ್ದಾರೆ.

<><><>

**ಕಿತ್ತೂರು ಕರ್ನಾಟಕ ಭಾಗದ,** ಗದಗ, ಹಾವೇರಿ, ಧಾರವಾಡ, ಬೆಳಗಾವಿ ಹಾಗೂ ಕಲ್ಯಾಣ ಕರ್ನಾಟಕ ಭಾಗದ, ಬೀದರ, ಬಳ್ಳಾರಿ ಜಿಲ್ಲೆಗಳಲ್ಲಿ, ಎಳ್ಳು ಅಮಾವಾಸ್ಯೆ ಪ್ರಯುಕ್ತ, ರೈತಾಪಿ ವರ್ಗ, ಅನ್ನ ನೀಡುವ ಭೂ ತಾಯಿಗೆ, ಪೂಜೆ ಸಲ್ಲಿಸಿ, ಬನ್ನಿ ಮರಕ್ಕೆ ಸೀರೆ ತೊಡಿಸಿ, ಸೀಮಂತ ಮಾಡಿ, ಚರಕ ಚೆಲ್ಲುವ ಮೂಲಕ ಸಂಭ್ರಮಿಸಿದರು.

<><><>

**ಧಾರವಾಡದ ಖ್ಯಾತ, ಚಿಕ್ಕಮಕ್ಕಳ ತಜ್ಞ ವೈದ್ಯ,** ಡಾಕ್ಟರ್ ರಾಜನ್ ದೇಶಪಾಂಡೆ ಅಧ್ಯಕ್ಷತೆಯ, ಮಕ್ಕಳ ಅಕಾದೆಮಿ, ಸಾರ್ಥಕ 25 ವರ್ಷಗಳನ್ನು ಪೂರೈಸಿ, ಬೆಳ್ಳಿ ಹಬ್ಬದ ಸಂಭ್ರಮದಲ್ಲಿದೆ. ಇಂದು ಸಂಜೆ, 5 ಗಂಟೆಗೆ ಧಾರವಾಡದ ಸೃಜನಾ ಅಣ್ಣಾಜಿರಾವ ಸಿರೂರ ರಂಗಮಂದಿರದಲ್ಲಿ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದ್ದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ,

ಉದ್ಘಾಟಿಸಲಿದ್ದಾರೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಹಳಿಯಾಳ ಶಾಸಕ, ಆರ್.ವಿ. ದೇಶಪಾಂಡೆ, ಪದ್ಮಶ್ರೀ ಪುರಸ್ಕೃತ, ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕ, ಪಂಡಿತ ಎಂ. ವೆಂಕಟೇಶ ಕುಮಾರ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

<><><>

**ಮಕ್ಕಳ ಅಕಾದೆಮಿ ಬೆಳ್ಳಿ ಹಬ್ಬದ ಸಂಭ್ರಮ** ಕುರಿತು, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಅಧ್ಯಕ್ಷ ಡಾಕ್ಟರ್ ರಾಜನ್ ದೇಶಪಾಂಡೆ.

<><><>

**ಡಾ. ರಾಜನ್ ದೇಶಪಾಂಡೆ ಧ್ವನಿ 38 ಸೆಕೆಂದುಗಳು**

<><><>

**ಆರು ದಶಕಗಳ ಕಾಲ**, ಸಂಗೀತ–ನೃತ್ಯ–ಸಾಂಸ್ಕೃತಿಕ ಕ್ಷೇತ್ರದಲ್ಲಿ, ಸಂಘಟಕರಾಗಿ ತೆರೆ ಮರೆಯಲ್ಲಿ ಗಮನಾರ್ಹ ಹಾಗೂ ಮಾದರಿ ಕೆಲಸ ಮಾಡಿದ, ದಿವಂಗತ ಅನಂತ ಹರಿಹರ ಅವರ ಸ್ಮರಣೆಗಾಗಿ, ಧಾರವಾಡದ ಜಿ.ಬಿ. ಜೋಶಿ ಸ್ಮಾರಕ ಟ್ರಸ್ಟ್, ವಿವಿಧ ಸಂಘಟನೆಗಳ ಸಹಯೋಗದಲ್ಲಿ, ಆಲೂರು ವೆಂಕಟರಾವ ಭವನದಲ್ಲಿ, ನಾಡಿದ್ದು 22 ರಿಂದ ಮೂರು ದಿನಗಳ ಕಾಲ, ಅನಂತ ಸ್ವರ ನಮನ ಸಂಗೀತೋತ್ಸವ ಆಯೋಜಿಸಿದೆ. ಜಿ.ಬಿ. ಜೋಶಿ ಸ್ಮಾರಕ ಟ್ರಸ್ಟ್‌ನ ಸಮೀರ ಜೋಶಿ ಹಾಗೂ ಕ್ಷಮತಾ ಸಂಸ್ಥೆಯ ಗೋವಿಂದ ಜೋಶಿ ಮಾಹಿತಿ ನೀಡಿ, ರುಚಿರಾ ಕೇದಾರ, ಜಯತೀರ್ಥ ಮೇವುಂಡಿ, ಸಾವನಿ ಶೇಂಡೆ, ಎಂ. ವೆಂಕಟೇಶ ಕುಮಾರ, ಮಂಜೂಷಾ ಪಾಟೀಲ ಅವರಿಂದ ಶಾಸ್ತ್ರೀಯ ಗಾಯನ ಕಛೇರಿ ಹಾಗೂ ಸಂದೀಪ ಆಪ್ಟೆ ಅವರಿಂದ ಸಿತಾರ ವಾದನ ಕಛೇರಿಗಳು ನಡೆಯಲಿವೆ ಎಂದರು.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ** ಶ್ರೀ ಸಿದ್ಧಾರೂಢ ಸ್ವಾಮೀಜಿ ಮಠದ ಆವರಣದಲ್ಲಿ, ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ, ಮೊಟ್ಟ ಮೊದಲ ಬಾರಿಗೆ, ಗಂಗಾ ಆರತಿ ಮಾದರಿಯಲ್ಲಿ, ಆರೂಢ ಆರತಿ ಅದ್ದೂರಿಯಾಗಿ, ನೆರವೇರಿತು. ಶ್ರೀ ಮಠದ ಮುಖ್ಯ ಆಡಳಿತಾಧಿಕಾರಿ ಹಾಗೂ ಧಾರವಾಡ ಜಿಲ್ಲೆ, ಪ್ರಧಾನ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಆರೂಢ ಆರತಿಗೆ, ದೀಪ ಬೆಳಗಿ ಚಾಲನೆ ನೀಡಿದರು. 35 ನಿಮಿಷಗಳ ಆರತಿ ಉತ್ಸವ ಭಕ್ತಾದಿಗಳನ್ನು ಭಾವ ಪರವಶಗೊಳಿಸಿತು.

<><><>

**ಹೊಸ ದಿಲ್ಲಿಯಲ್ಲಿ ಆಯೋಜಿತ, 68ನೇ ರಾಷ್ಟ್ರೀಯ** ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ, 50 ಮೀಟರ್ ಫ್ರೀ ಪಿಸ್ತೂಲ್ ಜ್ಯೂನಿಯರ್ ವಿಭಾಗದಲ್ಲಿ, ಕರ್ನಾಟಕ ತಂಡದ ಹುಬ್ಬಳ್ಳಿಯ ಐಶ್ವರ್ಯ ಬಾಳೇಹೊಸೂರ, ವಯೋಮಿಕ ವೆಂಕಟೇಶ ಹಾಗೂ ಆವಂತಿಕಾ ಮಧು ಜೊತೆ ಸೇರಿ, ಕಂಚಿನ ಪದಕ ಪಡೆದರು. ಮಧ್ಯಪ್ರದೇಶ ತಂಡಕ್ಕೆ ಚಿನ್ನ ಹಾಗೂ ರಾಜಸ್ಥಾನ ತಂಡ ಬೆಳ್ಳಿ ಪದಕ ಗಳಿಸಿತು. ಐಶ್ವರ್ಯ, ಹುಬ್ಬಳ್ಳಿಯ ಸ್ಪೋರ್ಟ್ಸ್ ಶೂಟಿಂಗ್ ಅಕಾದೆಮಿಯಲ್ಲಿ, ಮಾಜಿ ಸೈನಿಕ ರವಿಚಂದ್ರ ಬಾಲೇಹೊಸೂರ ಅವರಲ್ಲಿ, ತರಬೇತಿ ಪಡೆಯುತ್ತಿದ್ದಾರೆ.

<><><>

**ಕರ್ನಾಟಕ ರಾಜ್ಯ** ಕ್ರಿಕೆಟ್ ಸಂಸ್ಥೆ –ಕೆ.ಎಸ್.ಸಿ.ಎ. ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ, ಮಾಜಿ ಕ್ರಿಕೆಟಿಗ ವೆಂಕಟೇಶ ಪ್ರಸಾದ, ಹೊಸ ದಿಲ್ಲಿಯಲ್ಲಿ, ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾಹ್ ಹಾಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಐ.ಸಿ.ಸಿ. ಅಧ್ಯಕ್ಷ ಜಯ್ ಶಾಹ್ ಅವರನ್ನು ಭೇಟಿಯಾಗಿ, ಚರ್ಚಿಸಿದ್ದಾಗಿ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿಯವರ,** 9ನೇ ಆವೃತ್ತಿಯ, 'ಪರೀಕ್ಷಾ ಪೇ ಚರ್ಚಾ', 2026 ರ ಜನೆವರಿಯಲ್ಲಿ, ನಡೆಯಲಿದೆ. ಈಗಾಗಲೇ, 1 ಕೋಟಿ 27 ಲಕ್ಷ 38 ಸಾವಿರದ 536 ಜನ ತಮ್ಮ ಹೆಸರು ನೋಂದಾಯಿಸಿದ್ದಾರೆ. ಆ ಪೈಕಿ, 1 ಕೋಟಿ 18 ಲಕ್ಷದ 22 ಸಾವಿರದ 663 ಜನ ವಿದ್ಯಾರ್ಥಿಗಳು, 8 ಲಕ್ಷ 4 ಸಾವಿರದ 94 ಜನ ಶಿಕ್ಷಕರು ಹಾಗೂ 1 ಲಕ್ಷ 11 ಸಾವಿರದ 7 ನೂರಾ 79 ಜನ ಪಾಲಕರು, 'ಪರೀಕ್ಷಾ ಪೇ ಚರ್ಚಾ'ದಲ್ಲಿ ಪಾಲ್ಗೊಳ್ಳಲು, ನೋಂದಾಯಿಸಿಕೊಂಡಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**